# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.1338/2016/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 27.3.2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಗ್ರಾಮದ ಸರ್ವೆ ನಂ.183 ರ 3.20 ಎಕರೆ ಜಮೀನನ್ನು ಅಕ್ರಮ ಒತ್ತುವರಿದಾರರನ್ನು ತೆರವುಗೊಳಿಸಿ ಪುನ: ಅದನ್ನು ತಾಲ್ಲೂಕು ಪಂಚಾಯತಿಯ ಸ್ವಾಧೀನಕ್ಕೆ ಪಡೆಯಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು **ಕೋರಿ.**

*******

**ಶ್ರೀ ದೊಡ್ಡೇಗೌಡ, ತಂದೆ ಲೇಟ್ ರಾಮಯ್ಯ, ಚನ್ನರಾಯಪಟ್ಟಣ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ. ಹೆಚ್.ಜಿ.ರಾಮಮೂರ್ತಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಚನ್ನರಾಯಪಟ್ಟಣ ಗ್ರಾಮಪಂಚಾಯತಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ (2) ಶ್ರೀ ಕೃಷ್ಣಕುಮಾರ್, ಆರಕ್ಷಕ ಉಪನಿರೀಕ್ಷಕರು, ಚನ್ನರಾಯಪಟ್ಟಣ ಪೋಲೀಸ್ ಠಾಣೆ, ದೇವನಹಳ್ಳಿ ತಾಲ್ಲೂಕು, (ಇನ್ನು ಮುಂದೆ ಕ್ರಮವಾಗಿ 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.**

2. ದೂರಿನ ಸಂಕ್ಷಿಪ್ತ ವಿವರಣೆ:-

ದೂರುದಾರರು ತಮ್ಮ ದೂರಿನಲ್ಲಿ ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣ ಗ್ರಾಮದ ಸರ್ವೆ ನಂ.183 ಕ್ಷೇತ್ರ 50 ಎಕರೆ ಜಮೀನು ಅಧಿಕಾರಿಗಳ ನಿರ್ಲಕ್ಷದಿಂದಾಗ ಜನರು ಮನಬಂದಂತೆ ಅತಿಕ್ರಮಿಸಿ ಕಟ್ಟಡಗಳನ್ನು ಕಟ್ಟಿಕೊಂಡು ಗ್ರಾಮಪಂಚಾಯತಿಯಲ್ಲಿ ಅಕ್ರಮಖಾತೆ ಮಾಡಿಕೊಂಡಿರುತ್ತಾರೆ. ಗ್ರಾಮದಲ್ಲಿ ಸುಮಾರು 250 ಕುಟುಂಬಗಳಿದ್ದು ಈವರೆಗೆ 200ಕ್ಕೂ ಹೆಚ್ಚು ಜನರಿಗೆ ನಿವೇಶನ ಹಕ್ಕುಪತ್ರ ನೀಡಲಾಗಿರುತ್ತದೆ. ಪುನ: ಹಕ್ಕುಪತ್ರ ನೀಡಲು ಸಾರ್ವಜನಿಕ ಸೌಲಭ್ಯಗಳಿಗೆ ತೀರಾ ಅವಶ್ಯಕವಾಗಿ

ಬೇಕಾದ ಜಮೀನು ಉಳಿಸದಂತೆ ಆಶ್ರಯ ಯೋಜನೆಯಡಿಯಲ್ಲಿ ನಿವೇಶನ ವಿತರಿಸಲು 3.20 ಎಕರೆ ಮತ್ತು 3 ಎಕರೆ ಜಮೀನು ಕಾಯ್ದಿರಿಸಿ ಜಿಲ್ಲಾಧಿಕಾರಿಗಳು ತರಾತುರಿಯಲ್ಲಿ ಒಂದೇ ದಿನ 2 ಜ್ಞಾಪನಪತ್ರ ಹೊರಡಿಸಿ ಆಶ್ರಯ ಯೋಜನೆಗೆ ಸೀಮಿತಗೊಳಿಸಿ ಎಲ್.ಎನ್.ಡಿ./ಡಿ/ಸಿ.ಆರ್.147/2003–04 ದಿ.31.1.2004 ಹಾಗೂ ಎಲ್.ಎನ್.ಡಿ./ಡಿ/ಸಿ.ಆರ್.172/2003–04 ದಿ.11.2.2004ರಂತೆ ಆದೇಶ ಮಾಡಿರುತ್ತಾರೆ. ಈ ಜಮೀನನ್ನು ತಾಲ್ಲೂಕು ಪಂಚಾಯತಿಗೆ ವರ್ಗಾಯಿಸಿರುತ್ತಾರೆ. ಆದರೆ ಆಶ್ರಯ ಯೋಜನೆಯಡಿ ಅರ್ಹ ಫಲಾನುಭವಿಗಳನ್ನು ಗುರ್ತಿಸದೆ ಪ್ರಭಾವಿಗಳಿಗೆ, ತಮಗಿಷ್ಟಬಂದಂತೆ, ಅತಿಕ್ರಮಿಸಿ ಅಕ್ರಮ ಕಟ್ಟಡ ಕಟ್ಟಲು ಅವಕಾಶವಾಗಿರುವುದರಿಂದ ಈ ಬಗ್ಗೆ ಕ್ರಮಕೈಗೊಳ್ಳುವಂತೆ ಎದುರುದಾರರಿಗೆ ಅರ್ಜಿ ಸಲ್ಲಿಸಿದರೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಂಡು, ಸರ್ಕಾರಿ ಜಮೀನನ್ನು ಉಳಿಸಿಕೊಡಬೇಕೆಂದು ದೂರು ಸಲ್ಲಿಸಿದ್ದಾರೆ.

3. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸರ್ವೆ ನಂ.183ರಲ್ಲಿ ಪಿ.ರಾಮಕೃಷ್ಣ ಅವರು ಸರ್ವೆ ನಂಬರು ಜಾಗದಲ್ಲಿ ವಾಣಿಜ್ಯ ಕಟ್ಟಡ ಕಟ್ಟುತ್ತಿರುವ ಬಗ್ಗೆ ಕ್ರಮಕೈಗೊಳ್ಳಲು ತಾಲ್ಲೂಕು ಪಂಚಾಯತಿಯಿಂದ ಪತ್ರ ಬಂದಿದ್ದು ಆಗ ಸ್ಥಳ ಪರಿಶೀಲಿಸಿ ಪಿ.ರಾಮಕೃಷ್ಣ ಅವರಿಗೆ ನೋಟೀಸು ಜಾರಿಮಾಡಿ ಆ ಬಳಿಕ ಕಾಮಗಾರಿ ಮಾಡದಂತೆ ತಿಳುವಳಿಕೆ ನೀಡಿ ಹಿಂಬರಹ ನೀಡಲಾಗಿರುತ್ತದೆ. ಇದು ಒಟ್ಟು 74 ಎಕರೆ ಜಮೀನಿದ್ದು ಇದರಲ್ಲಿ ನಾಡಕಛೇರಿ, ಪೋಲೀಸ್ ಠಾಣೆ, ಪಶು ಆಸ್ಪತ್ರೆ, ಕೃಷಿ ಇಲಾಖೆ ಕಚೇರಿ, ಪ್ರಾಥಮಿಕ ಆರೋಗ್ಯ ಕೇಂದ್ರ ಕಛೇರಿಗಳು ಇರುತ್ತವೆ ಈ ಪೈಕಿ 6.20 ಎಕರೆ ಜಮೀನನ್ನು ವಸತಿಗೆ ಮಾಡಿದ್ದು, 3 ಎಕರೆಯಲ್ಲಿ ಹಕ್ಕುಪತ್ರಗಳನ್ನು ನೀಡಿರುತ್ತಾರೆ. ಇದರಲ್ಲು ಮುಕ್ಕಾಲು ಭಾಗದಷ್ಟು ಮನೆ ಕಟ್ಟಿದ್ದು, ಇನ್ನುಳಿದ ಕಾಲುಭಾಗ ನಿವೇಶನ ಉಳಿದಿರುತ್ತವೆ. ಆದರೆ 3.20 ಎಕರೆಯಲ್ಲಿ ಯಾರಿಗೂ ನಿವೇಶನ/ಹಕ್ಕುಪತ್ರ ನೀಡಿರುವುದಿಲ್ಲ. ಸುಮಾರು 10 ವರ್ಷಗಳಲ್ಲಿ ಗ್ರಾಮದ ಮುಖ್ಯಸ್ಥರು, ಗ್ರಾಮಪಂಚಾಯತಿ ಅಧ್ಯಕ್ಷರು, ಸದಸ್ಯರು ಸೇರಿ ನಿವೇಶನ ಇಲ್ಲದ ಸುಮಾರು 90–100 ಜನರಿಗೆ ತಲಾ 30ಷ40 ಅಡಿ ನಿವೇಶನಗಳನ್ನು ನೀಡಿ ಅಂದಿನಿಂದ ನಿವೇಶನದ ಅನುಭವದಲ್ಲಿರುತ್ತಾರೆ. ಆದ್ದರಿಂದ ಇದರಲ್ಲಿ ಯಾವುದೇ ಅಕ್ರಮ ಜರುಗಿರುವುದಿಲ್ಲ, ಕಾರಣ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ 2ನೇ ಎದುರುದಾರರು ಇದು ಸಿವಿಲ್ ಸ್ವರೂಪದ ವ್ಯಾಜ್ಯವಾಗಿದ್ದು, ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಲು ಹಿಂಬರಹ ನೀಡಿರುತ್ತಾರೆ. ಆದ್ದರಿಂದ

ಎದುರುದಾರರು ಪಿ.ರಾಮಕೃಷ್ಣ ಅವರೊಂದಿಗೆ ಅನೈತಿಕವಾಗಿ ಕೈಜೋಡಿಸಿ ಅಕ್ರಮವೆಸಗಿರುತ್ತಾರೆಂದು ತಿಳಿಸಿರುತ್ತಾರೆ.

5. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ ಮತ್ತು ದಾಖಲಾತಿಗಳು, ಮತ್ತು ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ಚನ್ನರಾಯಪಟ್ಟಣದ ಸರ್ವೆ ನಂ.183ರಲ್ಲಿ 3 ಎಕರೆ ಜಮೀನನ್ನು ಈಗಾಗಲೇ ಆಶ್ರಯ ಯೋಜನೆಯಡಿಯಲ್ಲಿ ನಿವೇಶನ ವಿಂಗಡಿಸಿ ಹಕ್ಕುಪತ್ರ ನೀಡಲಾಗಿರುತ್ತದೆಂದು ದೂರುದಾರರು ಹಾಗೂ ಎದುರುದಾರರು ಒಪ್ಪಿಕೊಂಡಿದ್ದು, ಆ ಬಗ್ಗೆ ದಾಖಲಾತಿಗಳು ಸಹ ಲಭ್ಯವಿರುತ್ತವೆ.

6. ಆದರೆ ಇನ್ನುಳಿದ 3.20 ಜಮೀನಿಗೆ ಸಂಬಂಧಿಸಿದಂತೆ, ಆಶ್ರಯ ಯೋಜನೆಯಿಂದ ಯಾವುದೇ ನಿವೇಶನ ವಿಂಗಡಿಸಿರುವುದಿಲ್ಲ ಹಾಗೂ ಹಕ್ಕುಪತ್ರ ನೀಡಿರುವುದಿಲ್ಲ, ಆದರೆ ಅದು ಕಆರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ದೇವನಹಳ್ಳಿ ಅವರ ಹೆಸರಿನಲ್ಲಿರುವುದು ಕಂಡುಬರುತ್ತದೆ. ದಿ.11.2.2004ರಂದು ಜಿಲ್ಲಾಧಿಕಾರಿಗಳು ಈ ಸರ್ವೆ ನಂ.183ರಲ್ಲಿ ಕ್ಷೇತ್ರ 3.20 ವಿಸ್ತೀರ್ಣವನ್ನು ಆಶ್ರಯ ಯೋಜನೆಯಡಿ ನಿವೇಶನ ಹಂಚಲು ಅಧಿಕೃತ ಜ್ಞಾಪನಪತ್ರ ಹೊರಡಿಸಿರುತ್ತಾರೆ. ಆದರೆ ಆನಂತರ ಈ ಜಮೀನನ್ನು ನಿವೇಶನವಾಗಿ ವಇಂಗಡಿಸಿ ಆಶ್ರಯ ಯೋಜನೆಯಲ್ಲಿ ಅರ್ಹ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಿರುವುದಿಲ್ಲ. ಆದರೆ ಈ 3.20 ಎಕರೆ ಜಮೀನನ್ನು ಪಿ.ರಾಮಕೃಷ್ಣ ಅವರು ಅತಿಕ್ರಮಿಸಿ ವಾಣಿಜ್ಯ ಕಟ್ಟಡ ಕಟ್ಟುತ್ತಿದ್ದು, ಹಾಗೂ ಯಾವುದೇ ಪಂಚಾಯತಿಯ ಗೊತ್ತುವಳಿ ಇಲ್ಲದೆ, ಅಧಿಕೃತ ಆದೇಶವಿಲ್ಲದೆ, ಪಂಚಾಯತಿ ಅಧಿಕಾರಿಗಳು ತಮಗಿಷ್ಟಬಂದವರಿಗೆ ಈ ಜಮೀನಿನಲ್ಲಿ ನಿವೇಶನಗಳನ್ನು ವಿಂಗಡಿಸಿ ಸ್ವಾಧೀನಕ್ಕೆ ನೀಡಿದ್ದು, ಕಾನೂನುಬಾಹಿರವೆಂದು ಕಂಡುಬರುತ್ತದೆ.

7. ಈ ಜಮೀನಿನ ಬಗ್ಗೆ 2004ರಲ್ಲಿಯೇ ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿಗಳ ಹೆಸರಿನಲ್ಲಿ ಜಮೀನು ವರ್ಗಾವಣೆಯಾಗಿದ್ದು, ಆನಂತರ ಗ್ರಾಮಸ್ಥರು ಹಾಗೂ ಟಿ.ರಾಮಕೃಷ್ಣ ಎನ್ನುವವರು ಅಕ್ರಮವಾಗಿ ಇದನ್ನು ಅತಿಕ್ರಮಿಸಿಕೊಂಡಿದ್ದು ಕಂಡುಬರುತ್ತದೆ. ಆದರೆ ಇದಕ್ಕೆ ಎದುರುದಾರರೇ ಕಾರಣವೆಂದು ಹೇಳಲು ಯಾವುದೇ ಸಮರ್ಪಕ ಸಾಕ್ಷಾಧಾರಗಳು ಇರುವುದಿಲ್ಲ. ಅದ್ದರಿಂದ ಎದುರುದಾರರ ವಿರುದ್ಧದ ಆಪಾದನೆಗಳು ಕ್ರಮಕ್ಕೆ ಅರ್ಹವಾಗಿರುವುದಿಲ್ಲ.

8. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ .ದೇವನಹಳ್ಳಿ ಗ್ರಾಮದ ಸರ್ವೆ ನಂ.183 ರ 3.20 ಎಕರೆ ಜಮೀನನ್ನು ಅಕ್ರಮ ಒತ್ತುವರಿದಾರರನ್ನು ತೆರವುಗೊಳಿಸಿ ಪುನ: ಅದನ್ನು ತಾಲ್ಲೂಕು ಪಂಚಾಯತಿಯ ಸ್ವಾಧೀನಕ್ಕೆ ಪಡೆಯಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

25-3-17.

[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.

25/3